**ಕಥೆ**



ಮೂಲ: **ರವಿ ಶರ್ಮಾ 'ಮಧುಪ್'**
ಕನ್ನಡಕ್ಕೆ: **ಡಿ.ಎನ್. ಶ್ರೀನಾಥ್**
ಕಲೆ: ಸಂತೋಷ್ ಸಸಿಹಿತ್ಲು



# ನಾಯಿ ಸಮಿತಿ

ನನ್ನ ದೊಡ್ಡಪ್ಪ ಭೀಮ ಸಿಂಗ್ ತುಂಬಾ ಸಿಟ್ಟಾಗಿದ್ದಾರೆ. ಅವರು ಸಿಟ್ಟಾಗುವುದು ಸಹಜವೂ ಹೌದು. ಮೊನ್ನೆ ಅವರ ಮೊಮ್ಮಗಳಾದ ಶ್ರೇಯಾಗೆ ಅವಳ ಕಾಲೇಜಿನಲ್ಲಿ ನಾಯಿಯೊಂದು ಕಚ್ಚಿತು. ವಾಸ್ತವವಾಗಿ ಘಟಿಸಿದ್ದೇನೆಂದರೆ, ಅದು ಭಾರತದ ನಾಯಿಯಾಗಿದ್ದು ಸಹಜವಾಗಿ ಹಿಂದಿಯನ್ನು ಚೆನ್ನಾಗಿ ತಿಳಿದಿತ್ತು. ಅದು ಆಂಗ್ಲ ಭಾಷೆಯ ಗಾದೆಗಳನ್ನು ಓದಿರಲಿಲ್ಲ, ಕೇಳಿಯೂ ಇರಲಿಲ್ಲ. ದೊಡ್ಡಪ್ಪ ಭೀಮ ಸಿಂಗ್‌ರ ಮೊಮ್ಮಗಳು ಆಂಗ್ಲ ಮಾಧ್ಯಮದಲ್ಲಿ ಅಧ್ಯಯನ ಮಾಡಿದ್ದಳು; ಅವಳಿಗೆ ಆಂಗ್ಲ ಗಾದೆಗಳು ಬಾಯಿಪಾಠವಾಗಿದ್ದವು. 'ಬಾರ್ಕಿಂಗ್ ಡಾಗ್ಸ್, ಸೆಲ್ಡಮ್ ಬೈಟ್' ಅಂದರೆ 'ಬೊಗಳುವ ನಾಯಿ ಕಚ್ಚುವುದಿಲ್ಲ' ಎಂದು ಓದಿದ್ದಳು. ಅವಳು ಇದೇ ನಿಯಮವನ್ನು ಅನುಸರಿಸುತ್ತಿದ್ದಳು. ಕಾಲೇಜಿನಲ್ಲಿ ನಾಯಿಯ ಸಂಖ್ಯೆ ಭಾರತದ ಜನಸಂಖ್ಯೆಯಂತೆ ಅಭೂತಪೂರ್ವವಾಗಿ ವೃದ್ಧಿಸುತ್ತಿತ್ತು. ಕಾಲೇಜಿನಲ್ಲಿ ನಾಯಿಯೊಂದು ಶ್ರೇಯಾಳ ವಿಚಿತ್ರ ವೇಷವನ್ನು ನೋಡಿ ಆಶ್ಚರ್ಯಗೊಂಡಿತು. ಅದು ಬೊಗಳುತ್ತಾ ತನ್ನ ವಿರೋಧವನ್ನು ಪ್ರದರ್ಶಿಸುತ್ತಾ, ಅವಳನ್ನು ಹಿಂಬಾಲಿಸುತ್ತಿತ್ತು. ಭಾರತದಲ್ಲಿ ತಮ್ಮ ವಿರೋಧವನ್ನು ಪ್ರದರ್ಶಿಸಲು ಎಲ್ಲರಿಗೂ ಮೌಲಿಕ ಅಧಿಕಾರವಿದೆ. ಹೀಗಿರುವಾಗ, ನಾಯಿ ಏಕೆ ಹಿಂದುಳಿಯಬೇಕು? ಶ್ರೇಯಾ ನಿಶ್ಚಿಂತಳಾಗಿದ್ದಳು, ಏಕೆಂದರೆ ಅವಳು ಇಂಗ್ಲಿಷ್‌ನಲ್ಲಿ ಬೊಗಳುವ ನಾಯಿ ಕಚ್ಚುವುದಿಲ್ಲವೆಂದು ಓದಿದ್ದಳು. ಆದರೆ, ಆ ನಾಯಿ ಇಂಗ್ಲಿಷಿನ ಈ ಗಾದೆಯನ್ನು ಓದಿರಲಿಲ್ಲ- ಕೇಳಿರಲಿಲ್ಲ. ಹೀಗಾಗಿ ಅದು ಶ್ರೇಯಾಳನ್ನು ಕಚ್ಚಿತು.

ಶ್ರೇಯಾ ತುಂಬಾ ಕಿರುಚಿದಳು- ಕೂಗಾಡಿದಳು, ಆದರೆ ನಾಯಿ ಕರುಣೆಯನ್ನು ತೋರಲಿಲ್ಲ. ಶ್ರೇಯಾ ಮನೆಗೆ ಹೋಗಿ ತನ್ನ ಅಜ್ಜನಿಗೆ ಈ ವಿಷಯ ತಿಳಿಸಿದಳು. ದೊಡ್ಡಪ್ಪ ಭೀಮ ಸಿಂಗ್ ಈ ಮೊದಲೇ ತಮ್ಮ ಕಾಲೋನಿಯ ನಾಯಿಗಳಿಂದ ತುಂಬಾ ವ್ಯಗ್ರರಾಗಿದ್ದರು. ಇದಕ್ಕೆ ಕಾರಣ, ದೊಡ್ಡಪ್ಪನ ನೀಳಕಾಯ ಮತ್ತು ದಷ್ಟಪುಷ್ಟ ಶರೀರ. ಅವರ ಕೈಯಲ್ಲಿ ಸದಾ ಒಂದು ದೊಣ್ಣೆ ಇರುತ್ತಿತ್ತು. ಕಚ್ಚೆ ಪಂಚೆ, ಕುರ್ತಾ ಮತ್ತು ಪೇಟ ಧರಿಸುತ್ತಿದ್ದ ಅವರ ಈ ವೇಷಭೂಷಣ ನಗರದ ನಾಯಿಗಳಿಗೆ ವಿಚಿತ್ರವಾಗಿ ತೋರುತ್ತಿತ್ತು. ಅವು ಅವರನ್ನು ಬೇರೊಂದು ಗ್ರಹದ ಪ್ರಾಣಿಯೆಂದು ತಿಳಿದು ತಮ್ಮ ಗುಂಪಿನೊಂದಿಗೆ ಅವರನ್ನು ತಮ್ಮ ಕ್ಷೇತ್ರದಿಂದ ಹೊರಗೆ ಅಟ್ಟುವ ಪ್ರಯತ್ನ ಮಾಡುತ್ತಿದ್ದವು. ಆದರೆ ದೊಡ್ಡಪ್ಪ, 'ನಾಯಿಗಳು ಬೊಗಳುತ್ತವೆ, ಆನೆಗಳು ಸಾಗುತ್ತಿರುತ್ತವೆ' ಎಂಬ ಹಳೆಯ ಗಾದೆಯಂತೆ ತಮ್ಮ ಮದಭರಿತ ನಡಿಗೆಯಿಂದ ಮುಂದಕ್ಕೆ ಸಾಗುತ್ತಲೇ ಇದ್ದರು.

ಶ್ರೇಯಾಳೊಂದಿಗೆ ನಾಯಿ ತೋರಿದ ಅಶಿಷ್ಟತೆ ದೊಡ್ಡಪ್ಪನಿಂದ ಸಹಿಸಲಾಗಲಿಲ್ಲ. ಅವರು ಮರುದಿನವೇ ತಮ್ಮ ಮೊಮ್ಮಗಳ ಕಾಲೇಜಿಗೆ ಹೋದರು. ಕಾಲೇಜಿನ ಪ್ರಿನ್ಸಿಪಾಲರು ದುಃಖವನ್ನು ವ್ಯಕ್ತಪಡಿಸುತ್ತಾ, ಈ ಬಗ್ಗೆ ಆವಶ್ಯಕ ಕ್ರಮವನ್ನು

